**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಾಮೋಜಿ ಗೌಡ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸರ್ಕಾರದ ಉತ್ತರ:**

**ವಿಷಯ:-** ದಿನಾಂಕ:13.03.2025ರ ಗುರುವಾರದ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಸ್ತಾಪಿಸಿದಂತೆ, ಬೇಸಿಗೆ ಆರಂಭವಾಗುತ್ತಿದ್ದಂತೆ ಬೆಂಗಳೂರಿನ ಪೂರ್ವಭಾಗದ ಕೆಲವು ಬಡಾವಣೆಗಳಾದ ಚನ್ನಸಂದ್ರ, ಕಲ್ಕೆರೆ, ಕನಕನಗರ, ಕೆ.ಆರ್.ಪುರಂ ಸೇರಿದಂತೆ ಸುತ್ತಮುತ್ತಲಿನ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಈಗಾಗಲೇ ಹೆಚ್ಚಿದ್ದು, ಖಾಸಗಿ ನೀರಿನ ಟ್ಯಾಂಕರ್‌ಗಳ ಓಡಾಟ ಹೆಚ್ಚಾಗುತ್ತಿರುವುದು ಕಂಡು ಬಂದಿರುತ್ತದೆ. ರಾಮಮೂರ್ತಿನಗರ, ಮುನ್ನೇಕೊಳಾಲು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೊಸದಾಗಿ ಕಾವೇರಿ ನೀರಿನ ಸಂಪರ್ಕ ಪಡೆದಿರುವವರಿಗೂ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ ಎಂಬ ದೂರುಗಳಿವೆ. ಕಳೆದ ವರ್ಷ ಜಲಮಂಡಳಿಯು ವಿವಿಧ ಬಡಾವಣೆಗಳಲ್ಲಿ ಅಲ್ಲಲ್ಲಿ ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಇಟ್ಟು, ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿತ್ತು, ಈ ವರ್ಷ ಈ ರೀತಿಯ ವ್ಯವಸ್ಥೆಗೆ ಇನ್ನೂ ಚಾಲನೆ ನೀಡಿಲ್ಲ. ದಿನ ಕಳೆದಂತೆ ನೀರಿನ ಸಮಸ್ಯೆ ಇನ್ನೂ ಹೆಚ್ಚು ಬಿಗಡಾಯಿಸುವ ಸಾಧ್ಯತೆ ಇದ್ದು, ಟ್ಯಾಂಕರ್ ಮೂಲಕ ನೀರಿನ ಪೂರೈಕೆಗೆ ವ್ಯವಸ್ಥೆ ಮಾಡುವಂತೆ ಸ್ಥಳೀಯರಿಂದ ಒತ್ತಡ ಹೆಚ್ಚಾಗಿದೆ. ಅದರಲ್ಲೂ ಕೆಲವು ಬಡಾವಣೆಗಳಲ್ಲಿ ಕಾವೇರಿ ನೀರಿನ ಸಂಪರ್ಕ ಪಡೆದ ಹಲವು ಮನೆಗಳಿಗೆ ಇನ್ನೂ ನೀರಿನ ಪೂರೈಕೆ ಆಗದೇ ಇರುವುದು ಶೋಚನೀಯ ಸಂಗತಿಯಾಗಿದೆ. ಖಾಸಗಿ ನೀರಿನ ಟ್ಯಾಂಕರ್ ಗೆ ಈಗಾಗಲೇ ದುಪ್ಪಟ್ಟು ಮೊತ್ತವನ್ನು ಬೇಡಿಕೆ ಇಡುತ್ತಿದ್ದು, ಇದರಿಂದ ಜನಸಾಮಾನ್ಯರ ಸ್ಥಿತಿಯು ಹೈರಾಣಾಗಿರುತ್ತದೆ. ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಉಚಿತ ನೀರಿನ ಟ್ಯಾಂಕರ್‌ಗಳನ್ನು ತುರ್ತಾಗಿ ವ್ಯವಸ್ಥೆ ಮಾಡಿ, ಜನ ಸಾಮಾನ್ಯರಿಗೆ ಅನುಕೂಲ ಮಾಡಿಕೊಡುವ ಕುರಿತು ಹಾಗೂ ಕೆಲವು ಬಡಾವಣೆಗಳಿಗೆ ಕಾವೇರಿ ನೀರಿನ ಸಂಪರ್ಕ ಇರುವಲ್ಲಿ ನೀರನ್ನು ತುರ್ತಾಗಿ ಬಿಡುಗಡೆ ಮಾಡುವ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಬಳಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

****

**ಉತ್ತರ:-**

- ಬೆಂಗಳೂರಿನ ಪೂರ್ವ ಭಾಗದಲ್ಲಿ ಕೆಲವು ಬಡಾವಣೆಗಳಾದ ಚನ್ನಸಂದ್ರ, ಕಲ್ಕೆರೆ, ಕನಕನಗರ, ಕೆ.ಆರ್.ಪುರಂ ಭಾಗದ ಸುತ್ತಮುತ್ತಲಿನ ಪ್ರದೇಶಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ 110 ಹಳ್ಳಿಗಳಿಗೆ ಸೇರ್ಪಡೆಗೊಂಡಿರುತ್ತವೆ.
- ಸದರಿ ಪ್ರದೇಶಗಳಲ್ಲಿ ಜನವರಿ-2025 ರಿಂದ ಕಾವೇರಿ ಯೋಜನೆ 5ನೇ ಹಂತದಿಂದ ಕುಡಿಯುವ ನೀರು ಸರಬರಾಜು ಮಾಡುವ ಕಾರ್ಯ ಪ್ರಾರಂಭವಾಗಿದೆ. ಬೆಂಗಳೂರು ಜಲಮಂಡಳಿಯು ಸುಮಾರು 5 ವರ್ಷಗಳ ಹಿಂದೆ ಅಳವಡಿಸಿರುವ 100ಮಿ.ಮಿ, 150ಮಿ.ಮಿ, 200ಮಿ.ಮಿ, 250ಮಿ.ಮಿ, 300ಮಿ.ಮಿ ಮತ್ತು 450ಮಿ.ಮಿ ವ್ಯಾಸದ ಡಿ.ಐ (Ductile Iron) ಕೊಳವೆಗಳನ್ನು ಬೆಸ್ಕಾಂ, ಬಿಎಸ್‌ಎನ್‌ಎಲ್, ಏರ್‌ಟೆಲ್, ಜಿಯೋ ಮತ್ತು ಗೇಲ್ ಸಂಸ್ಥೆಗಳು ಅನೇಕ ಸ್ಥಳಗಳಲ್ಲಿ ಹಾನಿಗೊಳಿಸಿರುವುದು ಕಂಡುಬಂದಿರುತ್ತದೆ. ಇದರಿಂದಾಗಿ ಕೊಳವೆಗಳನ್ನು ಚಾಲನೆಗೊಳಿಸುವಾಗ ಕುಡಿಯುವ ನೀರು ಸೋರಿಕೆ ಮುಖಾಂತರ ಪೋಲಾಗುತ್ತಿರುತ್ತದೆ. ಸದರಿ ಕೊಳವೆಗಳನ್ನು ತುರ್ತಾಗಿ ದುರಸ್ಥಿಗೊಳಿಸಿ ಹಂತ ಹಂತವಾಗಿ ಎಲ್ಲಾ ಬಡಾವಣೆಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.

- ಈಗಾಗಲೇ ಕೊಳಗೇರಿ ಪ್ರದೇಶಗಳಲ್ಲಿ ಮತ್ತು ನೀರಿನ ಬವಣೆ ಉಂಟಾಗಿರುವ ಪ್ರದೇಶಗಳಿಗೆ 2000 ರಿಂದ 4000 ಲೀಟರ್ ಸಾಮರ್ಥ್ಯದ ಮಿನಿ ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಅಳವಡಿಸಿ ಜಲಮಂಡಳಿಯ ಟ್ಯಾಂಕರ್ ಮೂಲಕ ಕಾವೇರಿ ಕುಡಿಯುವ ನೀರನ್ನು ಭರ್ತಿ ಮಾಡಿ ಅಲ್ಲಿನ ನಿವಾಸಿಗಳಿಗೆ ಅನುಕೂಲ ಮಾಡುವ ಕಾರ್ಯವನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ ಹಾಗೂ ಅವಶ್ಯಕತೆ ಅನುಗುಣವಾಗಿ ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಹೆಚ್ಚಿಸಲಾಗುತ್ತದೆ.
- ಜಿಲ್ಲಾಧಿಕಾರಿ ಬೆಂಗಳೂರು ನಗರ ಜಿಲ್ಲೆರವರು ಜನಸಾಮಾನ್ಯರ ಹಿತದೃಷ್ಟಿಯಿಂದ ಖಾಸಗಿ ನೀರಿನ ಟ್ಯಾಂಕರ್‌ರವರು ಕುಡಿಯುವ ನೀರಿಗೆ ದುಪ್ಪಟ್ಟು ಮೊತ್ತವನ್ನು ಬೇಡಿಕೆ ಇಡುವುದನ್ನು ನಿಯಂತ್ರಣಗೊಳಿಸಲು ದರವನ್ನು ನಿಗದಿಪಡಿಸಿರುತ್ತಾರೆ.
- ರಾಮಮೂರ್ತಿನಗರ ಮತ್ತು ಮುನೆಕೊಳಾಲು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾವೇರಿ ಸಂಪರ್ಕ ಕೇಂದ್ರಗಳನ್ನು ಅಳವಡಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಸದರಿ ಪ್ರದೇಶಗಳಿಗೆ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಿ ಅಲ್ಲಿನ ನಿವಾಸಿಗಳಿಗೆ ಬೇಸಿಗೆ ಬಿಕ್ಕಟ್ಟನ್ನು ನಿವಾರಿಸಲಾಗುವುದು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡಿರುವ 110 ಹಳ್ಳಿಗಳ ಪ್ರದೇಶಗಳಲ್ಲಿ ಇರುವ ಕೊಳವೆ ಬಾವಿಗಳನ್ನು ಸುಸ್ಥಿತಿಯಲ್ಲಿಟ್ಟು ಅವುಗಳ ಮೂಲಕ ನೀರಿನ ಅಭಾವವಿರುವ ಪ್ರದೇಶಗಳಿಗೆ ಹೆಚ್ಚಿನ ನೀರು ಸರಬರಾಜು ಮಾಡಲಾಗುತ್ತಿದೆ.
- ಸದರಿ ಪ್ರದೇಶಗಳ ಬಡಾವಣೆಗಳಿಗೆ ನೀರಿನ ಬಿಕ್ಕಟ್ಟನ್ನು ನಿವಾರಿಸುವ ಸಲುವಾಗಿ, ಹಾಲಿ ಇರುವ ಕೊಳವೆಗಳನ್ನು ತುರ್ತಾಗಿ ಕಾರ್ಯಾರಂಭಗೊಳಿಸಿ ಅಲ್ಲಿನ ನಿವಾಸಿಗಳಿಗೆ ಅನುಕೂಲವಾಗುವಂತೆ ಕಾವೇರಿ ಕುಡಿಯುವ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಸರಬರಾಜು ಮಾಡಲಾಗುವುದು.

**ಸಂಖ್ಯೆ: ನಅಇ 80 ಎಂಎನ್‌ಐ 2025**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ